# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ ಎ<br>Part – IV A | ಬೆಂಗಳೂರು, ಗುರುವಾರ, ೨೩, ಜುಲೈ, ೨೦೨೬ (ಶ್ರಾವಣ, ೦೧, ಶಕವರ್ಷ, ೧೯೪೮)<br>BENGALURU, THURSDAY, 23, JULY, 2026 (SHRAVANA ,01,ShakaVarsha,1948) | ನಂ. ೫೫೪<br>No.554 |
|---|---|---|

## ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 428 ಮೈಅಪ್ರಾ 2025(ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ, 4ನೇ ಮಹಡಿ,
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:23.07.2026

## ಅಧಿಸೂಚನೆ

ಸರ್ಕಾರದ ಆದೇಶ ಸಂಖ್ಯೆ:ಹೆಚ್ಎಂಎ 60 ಟಿಟಿಪಿ 1977, ದಿನಾಂಕ:12.08.1977 ಮತ್ತು ಸರ್ಕಾರದ ಆದೇಶ ಸಂಖ್ಯೆ:ಹೆಚ್ಯುಡಿ 417 ಟಿಟಿಪಿ 88(II), ದಿನಾಂಕ:24.04.1989 ರನ್ವಯ ಘೋಷಿಸಿಸಲಾಗಿರುವ ಚಿಕ್ಕಮಗಳೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4(ಎ)1 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಹಾಲಿ ಸ್ಥಳೀಯ ಯೋಜನಾ ಪ್ರದೇಶವನ್ನು ಒಳಗೊಂಡಂತೆ 08 ಗ್ರಾಮಗಳನ್ನು ಸೇರಿಸಿ, ಹಾಲಿ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲಾಗಿದೆ. ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ವಿವರಗಳನ್ನು ಅನುಬಂಧ-ಎ ರಲ್ಲಿ ಹಾಗೂ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಗಳನ್ನು ಅನುಬಂಧ-ಬಿ ರಲ್ಲಿ ನಮೂದಿಸಲಾಗಿದೆ.

ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಈ ಕೆಳಕಂಡ ಅಂಶಗಳನ್ನು ಅನುಸರಿಸತಕ್ಕದ್ದು.

1. ವಿಸ್ತರಿಸಲಾದ ಸ್ಥಳೀಯ ಯೋಜನಾ ಪ್ರದೇಶವನ್ನು ವ್ಯವಸಾಯ ವಲಯವೆಂದು ಪರಿಗಣಿಸಿ ಅನುಮೋದಿತ ಮಹಾಯೋಜನೆಯ ವ್ಯವಸಾಯ ವಲಯಕ್ಕೆ ಅನ್ವಯವಾಗುವ ವಲಯ ನಿಯಮಾವಳಿಗಳ ಅವಕಾಶಗಳಂತೆ ಅಭಿವೃದ್ಧಿಗಳನ್ನು ಅನುಮತಿಸುವುದು.

2. ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಜಮೀನುಗಳಿಗೆ ಸಂಬಂಧಪಟ್ಟಂತೆ ಸರ್ಕಾರವು ಹೊರಡಿಸಿರುವ ಆದೇಶಗಳು ಹಾಗೂ ಸ್ಥಳೀಯ ಯೋಜನಾ ಪ್ರದೇಶ ವಿಸ್ತರಿಸಿ ಆದೇಶ ಹೊರಡಿಸಿದ ಪೂರ್ವದಲ್ಲಿ ಕಂದಾಯ ಇಲಾಖೆಯಿಂದ ಭೂ ಪರಿವರ್ತಿಸಲು ಹೊರಡಿಸಿದ ಚಾಲ್ತಿಯಲ್ಲಿರುವ ಆದೇಶಗಳನ್ನು ಮತ್ತು ಸಕ್ಷಮ ಪ್ರಾಧಿಕಾರದಿಂದ ಪಡೆದ ವಿನ್ಯಾಸ ಅನುಮೋದನೆ ಅನುಸಾರ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಪರಿಗಣಿಸತಕ್ಕದ್ದು.

3. ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶಗಳ ವ್ಯಾಪ್ತಿಯ ಮಹಾಯೋಜನೆಗೆ ಸರ್ಕಾರದಿಂದ ಅಂತಿಮ ಅನುಮೋದನೆ ನೀಡುವವರೆಗೆ ವ್ಯವಸಾಯ ವಲಯದಲ್ಲಿರುವುದರಿಂದ ಭೂ ಪರಿವರ್ತನೆಗಳ ಪ್ರಸ್ತಾವನೆಗಳಿಗೆ ವಲಯ ನಿಯಮಾವಳಿಯಲ್ಲಿರುವ ಅವಕಾಶದಂತೆ ಕ್ರಮ ಜರುಗಿಸತಕ್ಕದ್ದು.

4. ಭೂ ಪರಿವರ್ತನೆ ಹಾಗೂ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳು ಪ್ರಾಧಿಕಾರವು ತಯಾರಿಸಬೇಕಾಗಿರುವ ಮಹಾಯೋಜನೆಗೆ ಪೂರಕವಾಗಿರುವ ಬಗ್ಗೆ ಮತ್ತು ಯೋಜನಾ ಬದ್ಧವಾಗಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ಜರುಗಿಸತಕ್ಕದ್ದು.

5. ಗ್ರಾಮಠಾಣಾ ಕ್ಷೇತ್ರಗಳಿಗೆ ಹೊಂದಿಕೊಂಡಂತಹ ಸ್ವಾಭಾವಿಕವಾಗಿ ಬೆಳವಣಿಗೆಗಳಾಗುವ ವ್ಯಾಪ್ತಿಯಲ್ಲಿ ಅಂದರೆ ಗ್ರಾಮ ಠಾಣಾ ಸುತ್ತಲಿನ 250.0ಮೀ ತ್ರಿಜ್ಯದಲ್ಲಿನ ಪ್ರದೇಶದಲ್ಲಿ ಚಾಲ್ತಿ ಮಹಾಯೋಜನೆಯ ಅನುಮೋದಿತ ವಲಯ ನಿಯಮಗಳಲ್ಲಿ ಅವಕಾಶಗಳಂತೆ ಅನುಮೋದನೆಗಳನ್ನು ನೀಡತಕ್ಕದ್ದು.

6. ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿದ ದಿನಾಂಕದಿಂದ 02 ವರ್ಷದ ಒಳಗಾಗಿ ಮಹಾಯೋಜನೆಯನ್ನು ಸಿದ್ದಪಡಿಸಿ ಸರ್ಕಾರದ ತಾತ್ಕಾಲಿಕ ಅನುಮೋದನೆಗೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ದಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ದಿ ಇಲಾಖೆ.

**ಚಿಕ್ಕಮಗಳೂರು ಪಟ್ಟಣದ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯಲ್ಲಿ ಬರುವ ಗ್ರಾಮಗಳ ವಿವರಗಳು**

**ಅನುಬಂಧ-ಎ**

| ಕ್ರ. ಸಂ. | ತಾಲ್ಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) | ಜನಸಂಖ್ಯೆ |
|---|---|---|---|---|---|
| 1 | ಚಿಕ್ಕಮಗಳೂರು | ಅಲ್ಲಂಪುರ | ಸ.ಕ.ಗ್ರಾಮ | 331.45 | 118401 |
| 2 | ಚಿಕ್ಕಮಗಳೂರು | ಬಾಳೇಹಳ್ಳಿ | ಸ.ಕ.ಗ್ರಾಮ | 183.26 | |
| 3 | ಚಿಕ್ಕಮಗಳೂರು | ಬಸವನಹಳ್ಳಿ | ಸ.ಕ.ಗ್ರಾಮ | 232.17 | |
| 4 | ಚಿಕ್ಕಮಗಳೂರು | ಚಿಕ್ಕಮಗಳೂರು | ಸ.ಕ.ಗ್ರಾಮ | 488.29 | |
| 5 | ಚಿಕ್ಕಮಗಳೂರು | ದಂಟರಮಕ್ಕಿ | ಸ.ಕ.ಗ್ರಾಮ | 221.24 | |
| 6 | ಚಿಕ್ಕಮಗಳೂರು | ರಾಮನಹಳ್ಳಿ | ಸ.ಕ.ಗ್ರಾಮ | 183.29 | |
| 7 | ಚಿಕ್ಕಮಗಳೂರು | ಕೆಂಪನಹಳ್ಳಿ | ಸ.ಕ.ಗ್ರಾಮ | 112.75 | |
| 8 | ಚಿಕ್ಕಮಗಳೂರು | ಹಿರೇಮಗಳೂರು | ಸ.ಕ.ಗ್ರಾಮ | 1293.48 | |
| 9 | ಚಿಕ್ಕಮಗಳೂರು | ಉಪ್ಪಳ್ಳಿ | ಸ.ಕ.ಗ್ರಾಮ | 382.59 | |
| 10 | ಚಿಕ್ಕಮಗಳೂರು | ಬೀಕನಹಳ್ಳಿ | ಸ.ಕ.ಗ್ರಾಮ | 406.25 | 1622 |
| 11 | ಚಿಕ್ಕಮಗಳೂರು | ಬೀಕನಹಳ್ಳಿ ಕಾವಲು | ಸ.ಕ.ಗ್ರಾಮ | 457.28 | 428 |

| | | | | | |
|---|---|---|---|---|---|
| 12 | ಚಿಕ್ಕಮಗಳೂರು | ಗವನಹಳ್ಳಿ | ಸ.ಕ.ಗ್ರಾಮ | 226.79 | 3127 |
| 13 | ಚಿಕ್ಕಮಗಳೂರು | ಹಂಪಾಪುರ | ಸ.ಕ.ಗ್ರಾಮ | 123.87 | 736 |
| 14 | ಚಿಕ್ಕಮಗಳೂರು | ಹುಳಿಯಾರಹಳ್ಳಿ | ಸ.ಕ.ಗ್ರಾಮ | 245.91 | 85 |
| 15 | ಚಿಕ್ಕಮಗಳೂರು | ಐಯ್ಯನಹಳ್ಳಿ | ಸ.ಕ.ಗ್ರಾಮ | 94.26 | 84 |
| 16 | ಚಿಕ್ಕಮಗಳೂರು | ಇಂದಾವರ | ಸ.ಕ.ಗ್ರಾಮ | 1025.55 | 1633 |
| 17 | ಚಿಕ್ಕಮಗಳೂರು | ಕರಡಿಹಳ್ಳಿಕಾವಲು | ಸ.ಕ.ಗ್ರಾಮ | 145.82 | 32 |
| 18 | ಚಿಕ್ಕಮಗಳೂರು | ನಲ್ಲೂರು | ಸ.ಕ.ಗ್ರಾಮ | 301.99 | 696 |
| 19 | ಚಿಕ್ಕಮಗಳೂರು | ತೇಗೂರು | ಸ.ಕ.ಗ್ರಾಮ | 296.44 | 2024 |
| **ಒಟ್ಟು = 19 ಗ್ರಾಮಗಳು** | | **ಹಾಲಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ = 6752.68** | | | |
| 20 | ಚಿಕ್ಕಮಗಳೂರು | ದುಮ್ಮಿಗೆರೆ | ಸ.ಕ.ಗ್ರಾಮ | 119.24 | 228 |
| 21 | ಚಿಕ್ಕಮಗಳೂರು | ಹುಕ್ಕುಂದ | ಸ.ಕ.ಗ್ರಾಮ | 250.34 | 790 |
| 22 | ಚಿಕ್ಕಮಗಳೂರು | ಕದ್ರಿಮಿದ್ರಿ | ಸ.ಕ.ಗ್ರಾಮ | 491.33 | 694 |
| 23 | ಚಿಕ್ಕಮಗಳೂರು | ಕರ್ತಿಕೆರೆ | ಸ.ಕ.ಗ್ರಾಮ | 461.40 | 2807 |
| 24 | ಚಿಕ್ಕಮಗಳೂರು | ಕುರುವಂಗಿ | ಸ.ಕ.ಗ್ರಾಮ | 1105.79 | 3274 |
| 25 | ಚಿಕ್ಕಮಗಳೂರು | ಮತ್ತಾವರ | ಸ.ಕ.ಗ್ರಾಮ | 723.15 | 1056 |
| 26 | ಚಿಕ್ಕಮಗಳೂರು | ಮುಗ್ತಿಹಳ್ಳಿ | ಸ.ಕ.ಗ್ರಾಮ | 160.44 | 752 |
| 27 | ಚಿಕ್ಕಮಗಳೂರು | ಶಿರಗುಂದ | ಸ.ಕ.ಗ್ರಾಮ | 275.98 | 1501 |
| **ಒಟ್ಟು = 08 ಗ್ರಾಮಗಳು** | | **ಹೆಚ್ಚುವರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ = 3587.67 ಹೆಕ್ಟೇರ್** | | | |

- ಸ.ಕ.ಗ್ರಾಮ = ಸಂಪೂರ್ಣ ಕಂದಾಯ ಗ್ರಾಮಗಳು (ಗ್ರಾಮ ಠಾಣಾ ಒಳಗೊಂಡಂತೆ).
- ಒಟ್ಟಾರೆ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ = 10340.35 ಹೆಕ್ಟೇರ್

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

## ಅನುಬಂಧ-ಬಿ

ವಿಸ್ತರಿತ ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶದ ಗಡಿಯು ಚಿಕ್ಕಮಗಳೂರು ಗ್ರಾಮದ ಸ.ನಂ.291 ರ ಆಗ್ನೇಯ ತುದಿಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಸ.ನಂ.290, 280, 279 ರ ಗಡಿಯಲ್ಲಿ ಸಾಗಿ ಹಿರೇಮಗಳೂರು ಗ್ರಾಮದ ಸ.ನಂ.931 ರ ನೈರುತ್ಯ ತುದಿಯನ್ನು ತಲುಪುತ್ತದೆ. ತದನಂತರ ಹಿರೇಮಗಳೂರು ಗ್ರಾಮದ ಸ.ನಂ.931 ರ ಪೂರ್ವಾಭಿಮುಖವಾಗಿ ಸಾಗಿ ಸ.ನಂ.929, 928 ರ ಗಡಿಯಲ್ಲಿಯೇ ಸ.ನಂ.887 ರ ಗಡಿಯಿಂದ ದಕ್ಷಿಣಾಭಿಮುಖವಾಗಿ ಚಲಿಸಿ ಸ.ನಂ.886, 884, 882 ರ ನೈರುತ್ಯ ತುದಿಯನ್ನು ತಲುಪುತ್ತದೆ. ನಂತರ ಸ.ನಂ.882 ರ ಪೂರ್ವಾಭಿಮುಖವಾಗಿ ಸ.ನಂ.881 ರ ಮುಖೇನ ಹಳ್ಳದ ದಕ್ಷಿಣದಲ್ಲಿ ಸಾಗುತ್ತಾ, ಸ.ನಂ.877, 839 ರ ಕೆರೆಯಿಂದ ಕರ್ತಿಕೆರೆ ಗ್ರಾಮದ ಸ.ನಂ.12 ರ ಕೆರೆಯ ನೈರುತ್ಯ ತುದಿಯನ್ನು ಬಂದು ತಲುಪುತ್ತದೆ. ತದನಂತರ ಕರ್ತಿಕೆರೆ ಗ್ರಾಮದ ಸ.ನಂ.12 ರ ಕೆರೆಯ ಅಂಚಿನಿಂದ ಸ.ನಂ.9 ರಿಂದ ಪೂರ್ವಾಭಿಮುಖವಾಗಿ ಚಲಿಸಿ ತರೀಕೆರೆ-ಬಿಳಿಕೆರೆ ರಾಜ್ಯ ಹೆದ್ದಾರಿ ಎನ್.ಹೆಚ್-57 ನ್ನು ಛೇದಿಸಿಕೊಂಡು ಸ.ನಂ. 289 ರ ದಕ್ಷಿಣದ ಗಡಿಯಲ್ಲಿ ಚಲಿಸುತ್ತಾ ಸ.ನಂ.288 ರ ನೈರುತ್ಯ ತುದಿಯನ್ನು ಬಂದು ತಲುಪುತ್ತದೆ. ನಂತರ ಸ.ನಂ. 288 ರ ನೈರುತ್ಯ

ತುದಿಯಿಂದ ಕರ್ತಿಕೆರೆ ಗ್ರಾಮದ ಸರ್ವೆ ನಂ.287 ರ ಕೆರೆ ಗಡಿಯಲ್ಲೇ ಸಾಗಿ, ಸ.ನಂ. 286 ರ ಆಗ್ನೇಯ ತುದಿಯನ್ನು ತಲುಪುತ್ತದೆ.

ತದನಂತರ ಕರ್ತಿಕೆರೆ ಗ್ರಾಮದ ಸ.ನಂ.286 ರ ಪೂರ್ವದ ಗಡಿಯಲ್ಲೇ ಉತ್ತರಕ್ಕೆ ಸಾಗುತ್ತಾ, ಕರ್ತಿಕೆರೆ ಗ್ರಾಮದ ಸ.ನಂ.235, 226 ರ ಪೂರ್ವದ ಗಡಿಯಲ್ಲಿಯೇ ಸಾಗಿ ಸ.ನಂ.202 ರಲ್ಲಿ ರೈಲ್ವೆ ಹಳಿಯನ್ನು ಛೇದಿಸಿಕೊಂಡು ಸ.ನಂ.304, 199 ಮತ್ತು 305 ರ ಈಶಾನ್ಯ ತುದಿ ಹಾಗೂ ಕುರುವಂಗಿ ಗ್ರಾಮದ ಸ.ನಂ.261 ರ ಗಡಿಯನ್ನು ತಲುಪುತ್ತದೆ. ನಂತರ ಕುರುವಂಗಿ ಗ್ರಾಮದ ಸ.ನಂ.261 ರ ಗಡಿಯಲ್ಲಿ ಪೂರ್ವಾಭಿಮುಖವಾಗಿ ಚಲಿಸುತ್ತಾ ಸ.ನಂ.235, 234, 232, 231, 196, 195 ಮತ್ತು ಸ.ನಂ.194 ರ ಆಗ್ನೇಯ ತುದಿಯನ್ನು ತಲುಪಿ ಉತ್ತರಾಭಿಮುಖವಾಗಿ ಚಲಿಸಿ ಕುರುವಂಗಿ ಗ್ರಾಮದ ಸ.ನಂ.194 ರ ಪೂರ್ವದಗಡಿಯಲ್ಲಿಯೇ ಸಾಗಿ ಪಶ್ಚಿಮಕ್ಕೆ ತಿರುಗಿ, ಕುರುವಂಗಿ ಗ್ರಾಮದ ಸ.ನಂ.41 ರ ಉತ್ತರ ಗಡಿಯಲ್ಲಿಯೇ ಸಾಗಿ ಹಿರೇಮಗಳೂರು ಗ್ರಾಮದ ಸ.ನಂ.539 ರ ಈಶಾನ್ಯ ತುದಿಯನ್ನು ಬಂದು ತಲುಪುತ್ತದೆ.

ನಂತರ ಹಿರೇಮಗಳೂರು ಗ್ರಾಮದ ಸ.ನಂ.539 ರ ಉತ್ತರದ ಗಡಿಯಿಂದ ಪಶ್ಚಿಮದ ಕಡೆಗೆ ಸಾಗುತ್ತಾ, ಕಡೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 173ನ್ನು ಛೇದಿಸಿಕೊಂಡು ಹಿರೇಮಗಳೂರು ಗ್ರಾಮದ ಸ.ನಂ.535 ಹಾಗೂ ಬೀಕನಹಳ್ಳಿ ಗ್ರಾಮದ ಸ.ನಂ.7 ರ ಆಗ್ನೇಯ ತುದಿಯನ್ನು ತಲುಪುತ್ತದೆ. ನಂತರ ಬೀಕನಹಳ್ಳಿ ಗ್ರಾಮದ ಸ.ನಂ.7 ರಿಂದ ಪೂರ್ವಾಭಿಮುಖವಾಗಿ ಉತ್ತರಕ್ಕೆ ಚಲಿಸುತ್ತಾ ಸ.ನಂ.6 ರ ಮುಖಾಂತರ ಬೀಕನಹಳ್ಳಿ ಕಾವಲು ಗ್ರಾಮದ ಸ.ನಂ.39 ರ ಆಗ್ನೇಯ ತುದಿಯನ್ನು ತಲುಪುತ್ತದೆ. ತದನಂತರ ಬೀಕನಹಳ್ಳಿ ಕಾವಲು ಗ್ರಾಮದ ಸ.ನಂ.39 ರ ಗಡಿಯಲ್ಲಿಯೇ ಸಾಗಿ ಉತ್ತರಾಭಿಮುಖವಾಗಿ ಚಲಿಸುತ್ತಾ ಪಶ್ಚಿಮಕ್ಕೆ ತಿರುಗಿ ಹುಳಿಯಾರಹಳ್ಳಿ ಗ್ರಾಮದ ಸ.ನಂ. 36 ರ ಈಶಾನ್ಯ ತುದಿಯನ್ನು ಬಂದು ತಲುಪುತ್ತದೆ.

ನಂತರ ಹುಳಿಯಾರಹಳ್ಳಿ ಗ್ರಾಮದ ಸ.ನಂ.36 ರ ಉತ್ತರದ ಗಡಿಯಲ್ಲಿ ಪಶ್ಚಿಮಕ್ಕೆ ಸಾಗಿ ಸ.ನಂ. 36, 35, 66 ರ ಮುಖೇನ ಸ.ನಂ.35, 71 ಮತ್ತು ಸ.ನಂ. 35 ನ್ನು ದಾಟಿ ಅಲ್ಲಂಪುರ ಗ್ರಾಮದ ಸ.ನಂ.179 ರ ಈಶಾನ್ಯ ತುದಿಯನ್ನು ಬಂದು ತಲುಪುತ್ತದೆ.

ತದನಂತರ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಅಲ್ಲಂಪುರ ಗ್ರಾಮದ ಸ.ನಂ.179, ಸ.ನಂ.26, ಸ.ನಂ.174 ರ ಉತ್ತರ ಗಡಿಯಲ್ಲಿ ಅಲ್ಲಂಪುರ ಗ್ರಾಮದ ಸ.ನಂ.26, ಸ.ನಂ.178 ರ ಮುಖೇನ ದಕ್ಷಿಣಾಭಿಮುಖವಾಗಿ ಚಲಿಸುತ್ತ ಸ.ನಂ.26 ರ ಮುಖೇನ ಸ.ನಂ.25, 17 ರ ಮುಖೇನ ಚಲಿಸುತ್ತ ತರೀಕೆರೆ-ಬಿಳಿಕೆರೆ ರಾಜ್ಯ ಹೆದ್ದಾರಿ-57 ನ್ನು ಛೇದಿಸಿಕೊಂಡು ಅಲ್ಲಂಪುರ ಗ್ರಾಮದ ಸ.ನಂ. 162, 16, 15, 160, 14, 13, 12, 11ರ ಕೆರೆ, 10, 9, 8, 156 ರ ಕೆರೆ, 154, 153, 152, 147, 146, 145, 143, 123, 122 ಹಳ್ಳ, 120, 121, 119, 118, 117, 116, 115, 110, 109 ರ ಪಶ್ಚಿಮದ ಗಡಿಯಲ್ಲಿ ಚಲಿಸಿ ಸ.ನಂ.109 ನೈರುತ್ಯ ತುದಿಯಲ್ಲಿ ಬಾಳೇಹಳ್ಳಿ ಗ್ರಾಮದ ಗಡಿಯನ್ನು ತಲುಪುತ್ತದೆ. ತದನಂತರ ಬಾಳೇಹಳ್ಳಿ ಗ್ರಾಮದ ಸ.ನಂ.114 ರ ಉತ್ತರದ ಗಡಿಯಲ್ಲಿ ಪಶ್ಚಿಮಾಭಿಮುಖವಾಗಿ ಚಲಿಸಿ, ಇಂದಾವರ ಗ್ರಾಮದ ಸರ್ವೆ ನಂ.

37 ರ ಈಶಾನ್ಯ ತುದಿಯನ್ನು ತಲುಪುತ್ತದೆ. ನಂತರ ಇಂದಾವರ ಗ್ರಾಮ ಸ.ನಂ.37 ರ ಮುಖೇನ ಪಶ್ಚಿಮಾಭಿಮುಖವಾಗಿ ಚಲಿಸಿ, ನಂತರ ದಕ್ಷಿಣಕ್ಕೆ ತಿರುಗಿ ಸ.ನಂ.37, 36, ಸ.ನಂ. 35 ರ ಪಶ್ಚಿಮ ಗಡಿಯಲ್ಲಿ ಚಲಿಸಿ ಸ.ನಂ.34 ರ ವಾಯುವ್ಯ ತುದಿಯನ್ನು ತಲುಪುತ್ತದೆ. ನಂತರದಲ್ಲಿ ಇಂದಾವರ ಗ್ರಾಮದ ಸ.ನಂ.34 ರ ಬಿಂದುವಿನಿಂದ ಪಶ್ಚಿಮಾಭಿಮುಖವಾಗಿ ಚಲಿಸಿ ಸ.ನಂ.576, ಸ.ನಂ. 33 ಮತ್ತು ಸ.ನಂ.32 ರ ಉತ್ತರದ ಗಡಿಯಲ್ಲಿಯೇ ಸಾಗಿ ಸ.ನಂ.32 ರ ವಾಯುವ್ಯ ಬಿಂದುವನ್ನು ತಲುಪಿ ದಕ್ಷಿಣಾಭಿಮುಖವಾಗಿ ಚಲಿಸಿ ಸ.ನಂ.32, 30 ರ ಗಡಿಯಲ್ಲಿಯೇ ಸಾಗಿ ಸ.ನಂ. 32 ರ ನೈರುತ್ಯ ಬಿಂದುವನ್ನು ತಲುಪಿ ಪೂರ್ವಕ್ಕೆ ತಿರುಗಿ ಸ.ನಂ.32 ರ ದಕ್ಷಿಣ ಗಡಿಯ ಮೇಲೆ ಹುಕ್ಕುಂದು ಗ್ರಾಮದ ಸ.ನಂ. 119 ರ ವಾಯುವ್ಯ ಬಿಂದುವನ್ನು ತಲುಪುತ್ತದೆ. ನಂತರ ದಕ್ಷಿಣಾಭಿಮುಖವಾಗಿ ಚಲಿಸಿ ಸ.ನಂ.119, 35 ರ ಪಶ್ಚಿಮ ಗಡಿಯಲ್ಲಿ ಚಲಿಸಿ, ಚಿಕ್ಕಮಗಳೂರು-ಮಲ್ಲಂದೂರು ಜಿಲ್ಲೆ ಮುಖ್ಯ ರಸ್ತೆಯನ್ನು ಛೇದಿಸಿಕೊಂಡು ಸ.ನಂ.32, 33 ರ ಗಡಿಯಲ್ಲಿ ಸ.ನಂ.32 ನೈರುತ್ಯ ಬಿಂದುವಿನಲ್ಲಿ ಮತ್ತಾವರ ಗ್ರಾಮ ಸರ್ವೆನಂ.385 ರ ಉತ್ತರ ಗಡಿಯನ್ನು ತಲುಪುತ್ತದೆ.

ನಂತರದಲ್ಲಿ ಮತ್ತಾವರ ಗ್ರಾಮದ ಸ.ನಂ.385 ರ ಉತ್ತರ ಗಡಿಯಿಂದ ಪಶ್ಚಿಮಾಭಿಮುಖವಾಗಿ ಚಲಿಸಿ, ಮತ್ತಾವರ ಗ್ರಾಮ ಸ.ನಂ.385 ರ ವಾಯುವ್ಯ ತುದಿಯನ್ನು ಬಂದು ತಲುಪಿ ನಂತರದಲ್ಲಿ ದಕ್ಷಿಣಾಭಿಮುಖವಾಗಿ ಸ.ನಂ.384, 386, 383, 382, 380, 386 ರ ಪಶ್ಚಿಮದ ಗಡಿಯಲ್ಲಿಯೇ ಚಲಿಸಿ ಹಾಗೂ ಸ.ನಂ. 386 ರ ನೈರುತ್ಯ ತುದಿಯನ್ನು ಬಂದು ತಲುಪುತ್ತದೆ. ನಂತರದಲ್ಲಿ ಪೂರ್ವಾಭಿಮುಖವಾಗಿ ಚಲಿಸುತ್ತಾ ಮತ್ತಾವರ ಗ್ರಾಮ ಸರ್ವೆನಂ.386, 378, 449, 450, 455, 454 ಮತ್ತು 377 ರ ದಕ್ಷಿಣದ ಗಡಿಯಲ್ಲಿ ಚಲಿಸಿ, 377 ರ ಆಗ್ನೇಯ ತುದಿಯನ್ನು ತಲುಪುತ್ತದೆ. ನಂತರದಲ್ಲಿ ಮತ್ತಾವರ ಗ್ರಾಮದ ಸ.ನಂ.377 ರ ಬಿಂದುವಿನಿಂದ ದಕ್ಷಿಣಾಭಿಮುಖವಾಗಿ ಚಲಿಸಿ ಸ.ನಂ. 376, 368, 367, 366, 365, 364, 363, 354, 355, 356, 358, 362, 361, 359, 360, 358 ರ ಗಡಿಯಲ್ಲಿ ಚಲಿಸಿ ಶಿರಗುಂದ ಗ್ರಾಮದ ಸ.ನಂ. 61 ರ ವಾಯುವ್ಯ ತುದಿಯನ್ನು ಬಂದು ತಲುಪುತ್ತದೆ.

ನಂತರ ಶಿರಗುಂದ ಗ್ರಾಮದ ಸ.ನಂ.61 ರ ಮುಖೇನ ಪಶ್ಚಿಮದ ಗಡಿಯಲ್ಲಿಯೇ ದಕ್ಷಿಣಾಭಿಮುಖವಾಗಿ ಸಾಗುತ್ತಾ ಸ.ನಂ.60, 58 ರ ಕೆರೆ, 57, 56, 55 ರ ಗಡಿಯಲ್ಲಿ ಚಲಿಸಿ 55 ರ ವಾಯುವ್ಯ ತುದಿಯನ್ನು ತಲುಪಿ ರಾಷ್ಟ್ರೀಯ ಹೆದ್ದಾರಿ NH-173 ಮಂಗಳೂರು-ಕಡೂರು ಹೆದ್ದಾರಿಯಲ್ಲಿಯೇ ಸಾಗಿ ನಂತರದಲ್ಲಿ ಶಿರಗುಂದ ಗ್ರಾಮದ ಸ.ನಂ.153, 8 ಮತ್ತು 181 ರ ವಾಯುವ್ಯ ತುದಿಯನ್ನು ತಲುಪುತ್ತದೆ. ನಂತರ ಶಿರಗುಂದ ಗ್ರಾಮದ ಸ.ನಂ.181 ರ ಪಶ್ಚಿಮದ ಗಡಿಯಲ್ಲಿ ದಕ್ಷಿಣಾಭಿಮುಖವಾಗಿ ಚಲಿಸಿ ಸ.ನಂ. 182, 8 ರ ನೈರುತ್ಯ ತುದಿಯನ್ನು ತಲುಪುತ್ತದೆ ಹಾಗೂ ದುಮ್ಮಿಗೆರೆ ಗ್ರಾಮದ ಸ.ನಂ.44 ರ ವಾಯುವ್ಯ ತುದಿಯನ್ನು ತಲುಪುತ್ತದೆ.

ನಂತರ ದುಮ್ಮಿಗೆರೆ ಗ್ರಾಮದ ಸ.ನಂ. 44 ರ ಪಶ್ಚಿಮದ ಗಡಿಯಲ್ಲಿ ದಕ್ಷಿಣಾಭಿಮುಖವಾಗಿ ಸಾಗುತ್ತ ಸ.ನಂ. 58 ರ ನೈರುತ್ಯ ತುದಿಯನ್ನು ತಲುಪುತ್ತದೆ. ನಂತರದಲ್ಲಿ ದುಮ್ಮಿಗೆರೆ ಗ್ರಾಮದ ಸ.ನಂ.58 ರ ದಕ್ಷಿಣದ ಗಡಿಯಿಂದ ಪೂರ್ವಾಭಿಮುಖವಾಗಿ ಚಲಿಸಿ ಕದ್ರಿಮಿದ್ರಿ ಗ್ರಾಮದ ಸ.ನಂ.241

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ರ ನೈರುತ್ಯ ತುದಿಯನ್ನು ತಲುಪುತ್ತದೆ. ನಂತರ ಕದ್ರಿಮಿದ್ರಿ ಗ್ರಾಮದ ಸ.ನಂ.241 ರ ದಕ್ಷಿಣದ ಗಡಿಯಲ್ಲಿ ಪೂರ್ವಾಭಿಮುಖವಾಗಿ ಸಾಗುತ್ತಾ ಸ.ನಂ.201, 242, 294, 293, 240, 239, 238, 237, 236, 209, 288, 204, 203, 202, 191, 190, 186, 185, 99, 86, 85, 84 ಮತ್ತು ಸ.ನಂ.83 ರ ದಕ್ಷಿಣ ಗಡಿಯಲ್ಲಿ ಚಲಿಸಿ ಸ.ನಂ.83 ರ ಆಗ್ನೇಯ ತುದಿಯನ್ನು ತಲುಪುತ್ತದೆ. ನಂತರದಲ್ಲಿ ಕದ್ರಿಮಿದ್ರಿ ಗ್ರಾಮದ ಸ.ನಂ. 83 ರ ಪೂರ್ವದ ಗಡಿಯಲ್ಲಿ ಉತ್ತರಾಭಿಮುಖವಾಗಿ ಚಲಿಸಿ 81, 80, 73, 291, 290, 42, 41, 285, 284, 30 ರ ಪೂರ್ವದ ಗಡಿಯಲ್ಲಿ ಚಲಿಸಿ ಸ.ನಂ. 30 ರ ಈಶಾನ್ಯ ತುದಿಯನ್ನು ತಲುಪುತ್ತದೆ ಹಾಗೂ ತೇಗೂರು ಗ್ರಾಮದ ಸ.ನಂ. 194 ರ ಆಗ್ನೇಯ ತುದಿಯನ್ನು ತಲುಪುತ್ತದೆ. ನಂತರ ತೇಗೂರು ಗ್ರಾಮದ ಸ.ನಂ. 194 ರ ಬಿಂದುವಿನಿಂದ ಪೂರ್ವಾಭಿಮುಖವಾಗಿ ಚಲಿಸಿ ಸ.ನಂ.193, 192, 116 ನಂತರ ರೈಲ್ವೆ ಹಳಿಯನ್ನು ಛೇದಿಸಿಕೊಂಡು ಸ.ನಂ. 115, 187, 188, 189 ರ ದಕ್ಷಿಣ ಗಡಿಯಲ್ಲಿ ಚಲಿಸಿ ಸ.ನಂ. 189 ರ ಆಗ್ನೇಯ ತುದಿಯನ್ನು ಬಂದು ತಲುಪುತ್ತದೆ. ನಂತರ ತೇಗೂರು ಗ್ರಾಮದ ಸ.ನಂ. 189 ರ ಪೂರ್ವದ ಗಡಿಯಲ್ಲಿ ಉತ್ತರಾಭಿಮುಖವಾಗಿ ಚಲಿಸಿ ಸ.ನಂ.186, 185, 184, 183, 114, 112, 111, 110, 108, 107 ರ ಪೂರ್ವದ ಗಡಿಯಲ್ಲಿ ಚಲಿಸಿ, ಸ.ನಂ.107 ರ ಈಶಾನ್ಯ ತುದಿಯಿಂದ ಚಿಕ್ಕಮಗಳೂರು ಗ್ರಾಮದ ಸ.ನಂ. 291 ರ ಪ್ರಾರಂಭದ ಬಿಂದುವನ್ನು ತಲುಪುತ್ತದೆ.

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU